ವಾರ್ಡ್ ಮಟ್ಟದ ಲೋಕೋಪಯೋಗಿ ಕಾಮಗಾರಿ, ನಗರ ಯೋಜನೆ ಹಾಗೂ ಮೂಲ ಸೌಕರ್ಯ ಸ್ಥಾಯೀ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ: 17 -08 -2022ರ

ನಡವಳಿಗಳು

ವಿಷಯದ ಸಂಖ್ಯೆ: **187/2022-23**

ಪ್ರಸ್ತಾವನೆ :

ಟಿಪ್ಪಣಿಯಲ್ಲಿ ವಿವರಿಸಿರುವಂತೆ, 2022-23ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ ಪಿ-2415 (Reserve Fund for T and F committee) ಅಡಿಯಲ್ಲಿ Comprehensive Development of Harohalli Lake in Chowdeshwari Ward No.02 ಅಂದಾಜು ಮೊತ್ತ ರೂ.400.00 ಲಕ್ಷಗಳಿಗೆ ನೀಡಲಾಗಿರುತ್ತದೆ.

ಸದರಿ ಕಾಮಗಾರಿಗಳನ್ನು ಕೈಗೊಳ್ಳಲು ಅಂದಾಜು ಪಟ್ಟಿಯನ್ನು 2018-19 ಮತ್ತು 2021-22ನೇ ಸಾಲಿನ (ವಿದ್ಯುತ್) ದರಪಟ್ಟಿ ಲೋಕೋಪಯೋಗಿ ಇಲಾಖೆ ಮತ್ತು ಅನುಮೋದಿತ ದರಗಳ ದರಪಟ್ಟಿಯಂತೆ ತಯಾರಿಸಲಾಗಿದೆ. ಸದರಿ ಕಾಮಗಾರಿಯನ್ನು ಸಾರ್ವಜನಿಕ ಸೇವಾ ಹಿತದೃಷ್ಟಿಯಿಂದ ತುರ್ತಾಗಿ ಕೈಗೊಳ್ಳಬೇಕಾಗಿದ್ದರಿಂದ ಸಕ್ಷಮ ಪ್ರಾಧಿಕಾರದಿಂದ ಆಡಳಿತಾತ್ಮಕ ಮಂಜೂರಾತಿಯನ್ನು ನಿರೀಕ್ಷಿಸಿ ಕಾರ್ಯಪಾಲಕ ಅಭಿಯಂತರರು ಯೋಜನಾ ವಿಭಾಗ ರವರು ದಿನಾಂಕ:30-05-2022ರಂದು ಟೆಂಡರ್ ಆಹ್ವಾನಿಸಲಾಗಿತ್ತು.

ತಾಂತ್ರಿಕ ಬಿಡ್ ಅನ್ನು ದಿನಾಂಕ:29-06-2022ರಂದು ತೆರೆಯಲಾಗಿದ್ದು, ಟೆಂಡರ್ ಪ್ರಕ್ರಿಯೆಯಲ್ಲಿ ಇಬ್ಬರು ಬಿಡ್‌ದಾರರಾದ Sri GOPIREDDY ಮತ್ತು Sri B.B.Umesha ರವರು ಭಾಗವಹಿಸಿದ್ದು ಇಬ್ಬರು ಬಿಡ್‌ದಾರರ ಆರ್ಥಿಕ ಬಿಡ್ ತೆರೆಯಲು ಮುಖ್ಯ ಅಭಿಯಂತರರು ಯಲಹಂಕ ವಲಯರವರು ಅನುಮೋದಿಸಿರುವಂತೆ ದಿನಾಂಕ:30-06-2022ರಂದು ಆರ್ಥಿಕ ಬಿಡ್ ಅನ್ನು ತೆರೆಯಲಾಗಿದ್ದು, ವಿವರ ಕೆಳಕಂಡಂತೆ ಇರುತ್ತದೆ.

ಕ್ರ ಸಂ	ಗುತ್ತಿಗೆದಾರರ ಹೆಸರು	ಟೆಂಡರ್‌ಗಿಟ್ಟ ಮೊತ್ತ (ರೂ.ಗಳಲ್ಲಿ) (2018-19ನೇ ಸಾಲಿನ ದರಪಟ್ಟಿಯಂತೆ	ಗುತ್ತಿಗೆದಾರರ ನಮೂದಿಸಿದ ಮೊತ್ತ (ರೂ.ಗಳಲ್ಲಿ)	ಗುತ್ತಿಗೆದಾರರು ನಮೂದಿಸಿದ ಮೊತ್ತವನ್ನು ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡವಾರು ಪ್ರಿಮಿಯಂ	ಷರಾ
1	**Sri. GOPIREDDY**	**3,48,43,095.03**	**3,65,80,951.45**	**4.99% ಹೆಚ್ಚು**	ಎಲ್-1
2	**Sri. B.B.Umesha**		**3,82,88,103.56**	**9.89% ಹೆಚ್ಚು**	ಎಲ್-2

ಮಾನ್ಯ ಮುಖ್ಯ ಆಯುಕ್ತರವರು ಸೂಚಿಸಿರುವಂತೆ ಶೇ.2.00%ರಷ್ಟು ಟೆಂಡರ್ ಪ್ರಿಮಿಯಂಗೆ ಮಿತಿಗೊಳಿಸಲಾಗಿದೆ. ಅದರಂತೆ ಗುತ್ತಿಗೆದಾರರಿಗೆ ದರ ಸಂಧಾನ ನಡೆಸಿದ್ದು, ಸಂಧಾನದ ನಂತರ ಗುತ್ತಿಗೆದಾರರು ಶೇಕಡ 2ರಷ್ಟು ಟೆಂಡರ್ ಪ್ರಿಮಿಯಂಗೆ ಕಾಮಗಾರಿ ನಿರ್ವಹಿಸಲು ಒಪ್ಪಿರುತ್ತಾರೆ. ವಿವರ ಈ ಕೆಳಕಂಡಂತೆ ಇದೆ.

Scanned by TapScanner

ಕ್ರ ಸಂ	ಬಿಡ್‌ದಾರರ ಹೆಸರು	2021–22ನೇ ಸಾಲಿನ ದರ ಪಟ್ಟಿಯಂತೆ ಟೆಂಡರ್‌ಗಿಟ್ಟ ಮೊತ್ತ	ಗುತ್ತಿಗೆದಾರರು ನಮೂದಿಸಿದ ಮೊತ್ತ ರೂ:	ಶೇಕಡವಾರು	ಗುತ್ತಿಗೆದಾರರು ನೀಡಿರುವ ದರ ಸಂಧಾನ ಮೊತ್ತ ರೂ:	ಶೇಕಡವಾರು
1	Sri GOPIREDDY	ರೂ.3,48,43,095.03	3,65,80,951.45	4.99% ಹೆಚ್ಚು	3,55,40,188.36	2.00% ಹೆಚ್ಚು

ಈ ಕೆಳಕಂಡ ಷರತ್ತುಗಳಿಗೆ ಒಳಪಡಿಸಿದೆ.

1. ಪ್ರಸ್ತಾಪಿತ ಕಾಮಗಾರಿಗಳ ಸ್ಥಳ ಪರಿವೀಕ್ಷಣೆ ಮಾಡಿ ಕಾಮಗಾರಿಯ ಅವಶ್ಯಕತೆ ಬಗ್ಗೆ ಹಾಗೂ ಸದರಿ ಕಾಮಗಾರಿಯನ್ನು ಪಾಲಿಕೆಯ ಹಿಂದಿನ ಆಯವ್ಯಯಗಳಲ್ಲಿ/ ಅನುದಾನಗಳಲ್ಲಿ ಕೈಗೊಂಡಿಲ್ಲದೆ ಇರುವ ಮತ್ತು ಪುನಾರಾವರ್ತನೆಯಾಗದೇ ಇರುವುದನ್ನು ಖಚಿತ ಪಡಿಸಿಕೊಳ್ಳುವುದು.
2. ಕಾಮಗಾರಿಯನ್ನು ಅನುಷ್ಠಾನಗೊಳಿಸುವ ಪೂರ್ವದಲ್ಲಿ ಆಯುಕ್ತರವರ ಕಛೇರಿ ಆದೇಶ ಸಂಖ್ಯೆ:ಮುಲೆಅ/ಆಯವ್ಯ/2019–20/ಪಿಆರ್‌/11/2018–19 ದಿನಾಂಕ:12–06–2019 ಮತ್ತು ಆಯುಕ್ತರವರ ಆಂತರಿಕ ಕಛೇರಿ ಟಿಪ್ಪಣಿ ಸಂಖ್ಯೆ:ಬಿಬಿಎಂಪಿ/ಆ/ಪಿ.ಆರ್‌/5287/2019–20, ದಿನಾಂಕ:05–11–2019 ಮತ್ತು ಬಿಬಿಎಂಪಿ/ಪಿ/ಪಿಆರ್‌/ 6166/2019–20, ದಿನಾಂಕ:13–12–2019ರಲ್ಲಿನ ನಿರ್ದೇಶನಗಳನ್ನು/ಪ್ರಕ್ರಿಯೆಗಳನ್ನು ಅನುಸರಿಸತಕ್ಕದ್ದು,
3. ಕಾಮಗಾರಿಗೂ ಮುನ್ನ ಹಾಗೂ ನಂತರದ GPS ಯುಳ್ಳ ಛಾಯಾ ಚಿತ್ರಗಳನ್ನು ಸಲ್ಲಿಸತಕ್ಕದ್ದು,

ಈ ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ಸದರಿ ಕಾಮಗಾರಿಯ ಅಂದಾಜು ಮೊತ್ತ ರೂ.400.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆಯನ್ನು ನಿರೀಕ್ಷಿಸಿ ಟೆಂಡರ್ ಆಹ್ವಾನಿಸಲಾಗಿರುವುದರಿಂದ ಘಟನ್ನೋತ್ತರ ಆಡಳಿತಾತ್ಮಕ ಅನುಮೋದನೆ ಹಾಗೂ ಸದರಿ ಕಾಮಗಾರಿಯನ್ನು ಸಾರ್ವಜನಿಕರ ಸೇವಾ ಹಿತದೃಷ್ಟಿಯಿಂದ ತುರ್ತಾಗಿ ಕೈಗೊಳ್ಳಬೇಕಾಗಿರುವುದರಿಂದ ಹಾಗೂ ಕರ್ನಾಟಕ ಕೆರೆ ಸಂರಕ್ಷಣೆ ಪ್ರಾಧಿಕಾರದಿಂದ ಅನುಮೋದನೆ ನಿರೀಕ್ಷಿಸಿ ಟೆಂಡರ್ ಕರೆದಿರುವ ಕ್ರಮವನ್ನು ಸ್ಥಿರೀಕರಿಸಿ, ಗುತ್ತಿಗೆದಾರರಾದ ಶ್ರೀ.ಗೋಪಿರೆಡ್ಡಿ ರವರು ನಮೂದಿಸಿರುವ ದರ ಸಂಧಾನಿತ ಮೊತ್ತವಾದ ರೂ.3,55,40,188.36 ಗಳನ್ನು ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇ.2.00% ರಷ್ಟು ಅಧಿಕ ಟೆಂಡರ್ ಪ್ರೀಮಿಯಂಗೆ (2021–22ನೇ ಸಾಲಿನ ದರಪಟ್ಟಿ) ಅನುಮೋದನೆ ನೀಡಲು ಕೋರುತ್ತಾ, ವಾರ್ಡ್ ಮಟ್ಟದ ಲೋಕೋಪಯೋಗಿ ಕಾಮಗಾರಿ, ನಗರ ಯೋಜನೆ ಹಾಗೂ ಮೂಲ ಸೌಕರ್ಯ ಸ್ಥಾಯಿ ಸಮಿತಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ತೀರ್ಮಾನಕ್ಕಾಗಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಆಡಳಿತ) ಹಾಗೂ ವಲಯ ಆಯುಕ್ತರು (ಯಲಹಂಕ) ರವರ ದಿನಾಂಕ:01–08–2022ರ ಟಿಪ್ಪಣಿ.

ತೀರ್ಮಾನ: ವಲಯ ಆಯುಕ್ತರು (ಯಲಹಂಕ)ರವರ ದಿನಾಂಕ:01–08–2022ರ ಟಿಪ್ಪಣಿಯನ್ನು ಒಪ್ಪಿದೆ.

(ರಾಕೇಶ್ ಸಿಂಗ್)
ಆಡಳಿತಗಾರರು

Scanned by TapScanner